**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು**

**S.C. No.** 241/2023

**ಸಾಕ್ಷಿಯನ್ನು ದಿನಾಂಕ 28.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಹೇಮಲತ | ಪಿ.ಡಬ್ಲ್ಯೂ-5 |
| ತಂದೆಯ/ ಗಂಡನ ಹೆಸರು | : | ವಿಮಲಕುಮಾರ್ | ಸಿ.ಡಬ್ಲ್ಯೂ-14 |
| ವಯಸ್ಸು | : | 30 | |
| ಉದ್ಯೋಗ | : | ಗೃಹಿಣಿ | |
| ವಾಸ ಸ್ಥಳ | : | ಆನಂದನಗರ | |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

ಚಾಸ 1 ಮತ್ತು 7 ನನ್ನ ತಂದೆ ತಾಯಿ ಇರುತ್ತಾರೆ. ಚಾಸ 12 ಮತ್ತು 13 ನನ್ನ ಅಕ್ಕ ಮತ್ತು ಭಾವ. ಚಾಸ 15 ನನ್ನ ಗಂಡ ಇರುತ್ತಾರೆ. ಮೃತ ಪಲ್ಲವಿ ನನ್ನ ಕೊನೆ ತಂಗಿ ಇರುತ್ತಾಳೆ. ಚಾಸ 17 ರಿಂದ 19 ನನ್ನ ಮಾವಂದಿರಿದ್ದು, ಚಾಸ 20 ನನ್ನ ಮಾವನ ಮಗನಿರುತ್ತಾನೆ. ಚಾಸ 11 ವೈಭವ್ ನನ್ನ ತಂಗಿ ಪಲ್ಲವಿಯ ಮಗನಿರುತ್ತಾನೆ. ನ್ಯಾಯಾಲಯದ ಮುಂದಿರುವ ಆರೋಪಿ ನನ್ನ ತಂಗಿ ಪಲ್ಲವಿಯ ಗಂಡನಿರುತ್ತಾನೆ. ಆರೋಪಿ ಮೂಲತಃ ಬೆಂಗಳೂರಿನ ಬೇಗೂರು ಗ್ರಾಮದವರು. ನನ್ನ ತಂಗಿ ಪಲ್ಲವಿಯ ಮದುವೆ ಕಾಲಕ್ಕೆ ಅರೋಪಿಯು ಮೈಸೂರಿನ ನಜರಬಾದ್ ನಲ್ಲಿದ್ದನು.

ಅವರ ಮದುವೆ 2014 ರಲ್ಲಿ ಆಗಿತ್ತು. ಮದುವೆ ಬಳಿಕ ಆರೋಪಿ ಮತ್ತು ನನ್ನ ತಂಗಿ ಎನ್.ಆರ್.ಮೊಹಲ್ಲದಲ್ಲಿ ವಾಸವಿದ್ದರು. ಆನಂತರ ಅವರು ಬೇರೆ ಬೇರೆ ಮನೆಯಲ್ಲಿ ವಾಸವಿದ್ದರು. ಎನ್.ಆರ್.ಮೊಹಲ್ಲದಲ್ಲಿ ವಾಸವಿದ್ದಾಗ ನನ್ನ ತಂಗಿ ಗರ್ಭಿಣಿಯಾಗಿದ್ದಳು. ಆಗ 5 ತಿಂಗಳ ಗರ್ಭಿಣಿಯಾದ ಅವಳನ್ನು ನನ್ನ ತಾಯಿ ಮನೆಗೆ ಕರೆದುಕೊಂಡು ಬಂದಿದ್ದರು. ಅದಕ್ಕೂ ಮೊದಲು ಸಹ ನನ್ನ ತಂಗಿ ನನ್ನ ತಾಯಿ ಮನೆಗೆ ಬಂದು ಹೋಗುವುದನ್ನು ಮಾಡುತ್ತಿದ್ದರು. ನನ್ನ ತಂಗಿಗೆ ಮಗು ಜನಿಸಿ 1 ವರ್ಷದವರೆಗೆ ನನ್ನ ತಂಗಿ ನನ್ನ ತಾಯಿ ಮನೆಯಲ್ಲಿದ್ದಳು. ನನ್ನ ತಾಯಿ ವಾಸವಿದ್ದ ಮನೆಯ ಮೇಲ್ಬಾಗದ ಮನೆಯಲ್ಲಿ ನನ್ನ ಅಕ್ಕ ಜ್ಯೋತಿ ಹಾಗು ಅವರ ಗಂಡ ವಾಸವಿದ್ದರು. ಮಗು ಜನಿಸಿ 1 ವರ್ಷದ ಬಳಿಕ ಆರೋಪಿ ಮತ್ತು ನನ್ನ ತಂಗಿ ವರುಣದಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದರು. ನಂತರ ಆರೋಪಿಯು ವರುಣದಲ್ಲಿ ಸೈಟ್ ತೆಗೆದುಕೊಂಡು ಮನೆ ಕಟ್ಟಲು ಪ್ರಾರಂಭಿಸಿದ. ಆ ಕಾಲಕ್ಕೆ ಮನೆ ಪೂರ್ಣಗೊಳ್ಳುವ ಮೊದಲೇ ಆರೋಪಿ ಸಾಲ ಮಾಡಿಕೊಂಡಿದ್ದರಿಂದ ಹಾಗೂ ತನ್ನ ಹೆಂಡತಿ ಜೊತೆ ಜಗಳ ಮಾಡಿಕೊಂಡು ಎಲ್ಲಿಗೋ ಹೋಗಿದ್ದ. ನನ್ನ ತಂಗಿ ಪಲ್ಲವಿ ಯಾರ ಜೊತೆ ಮಾತನಾಡಿದರೂ ಅನುಮಾನಪಡುತ್ತಿದ್ದ ಮತ್ತು ನಿನ್ನ ತಂದೆ ಮನೆಯಿಂದ ಹಣ ತೆಗೆದುಕೊಂಡು ಬಾ ಎಂದು ತೊಂದರೆ ನೀಡುತ್ತಿದ್ದ. ಆಗ ನನ್ನ ತಂದೆ ತಾಯಿ ಆ ಮನೆಯನ್ನು ಪೂರ್ಣಗೊಳಿಸಿದರು. ಅದೇ ಮನೆಯಲ್ಲಿ ನನ್ನ ತಂಗಿ, ಅವಳ ಮಗ ಹಾಗೂ ನನ್ನ ಅಜ್ಜ ಅಜ್ಜಿ ವಾಸವಿದ್ದರು. ನಂತರ ನನ್ನ ತಾಯಿ ತಂದೆ ಮನೆಯ ಸಾಲ ತೀರಿಸಿದರು.

ನಂತರ ನನ್ನ ಮಾವನ ಮಗಳ ಮದುವೆ ನಿಶ್ಚಯವಾದಾಗ ಆರೋಪಿ ವಾಪಸ್ ಬಂದಿದ್ದ. ಆಗ ಆರೋಪಿ ನನ್ನ ಮಾವಂದಿರ ಬಳಿ ಮುಂದೆ ನನ್ನ ಹೆಂಡತಿಯನ್ನು ಚನ್ನಾಗಿ ನೋಡಿಕೊಳ್ಳುತ್ತೇನೆ ಎಂದು ಹೇಳಿದ್ದ. ಆ ಕಾಲಕ್ಕೆ ಚನ್ನವೀರಣ್ಣರಾಧ್ಯ ಇವರ ಮನೆಯಲ್ಲಿ ಮಾತುಕತೆಯಾಗಿತ್ತು. ಆಗ ಚನ್ನವೀರಣ್ಣರಾಧ್ಯ ಇವರು ನಾಡನಹಳ್ಳಿಯಲ್ಲಿ 60 ಸಾವಿರ ಹಣ ಅಡ್ವಾನ್ಸ ಎಂದು ನೀಡಿ ಬಾಡಿಗೆ ಮನೆ ಮಾಡಿಕೊಟ್ಟರು. ಒಂದು ಬಾರಿ ನನ್ನ ತಂಗಿ ಚಾಮುಂಡಿ ಬೆಟ್ಟದ ಬಳಿ ಟೈಲರಿಂಗ್ ಕಲಿಯಲು ಹೋಗಿದ್ದಾಗ ನನ್ನ ಅಕ್ಕ ಜ್ಯೋತಿ ಅವಳ ಗಂಡನಿಗೆ ಅವರ ಮನೆಗೆ ಕರೆದುಕೊಂಡು ಬರಲು ಹೇಳಿದ್ದರಿಂದ ನನ್ನ ಅಕ್ಕ ಜ್ಯೋತಿಯ ಗಂಡ ಅವಳನ್ನು ತನ್ನ ಬೈಕಿನಲ್ಲಿ ಕೂರಿಸಿಕೊಂಡು ಅವರ ಮನೆಗೆ ಬಂದಿದ್ದ. ಆ ಕಾಲಕ್ಕೆ ಆರೋಪಿ ನನ್ನ ಹೆಂಡತಿಯನ್ನು ನೀನು ಏಕೆ ಕರೆದುಕೊಂಡು ಬಂದೆ ನಿನಗೂ ಅವಳಿಗೂ ಏನು ಸಂಬಂಧ ಎಂದು ಜಗಳ ಮಾಡಿದ. ಆ ಬಗ್ಗೆ ನನಗೆ ನನ್ನ ತಾಯಿ ಹೇಳಿದ್ದರು.

ದಿನಾಂಕ 14.6.2023 ರಂದು ಬೆಳಿಗ್ಗೆ ಆರೋಪಿಯು ನನ್ನ ಮಾವನಿಗೆ ಫೋನ್ ಮಾಡಿ ಪಲ್ಲವಿಯನ್ನು ಕೊಲೆ ಮಾಡಿರುವುದಾಗಿ ಹೇಳಿರುತ್ತಾನೆ. ನಂತರ ನನ್ನ ಮಾವನ ಮಗಳು ಮೇಘ ನನಗೆ ಫೋನ್ ಮಾಡಿ ವಿಷಯ ತಿಳಿಸಿದರು. ಆಗ ನಾನು ಮತ್ತು ನನ್ನ ಗಂಡ ನನ್ನ ತಾಯಿಯ ಮನೆ ಬಳಿ ಹೋಗಿದ್ದೆವು. ಅಲ್ಲಿಂದ ನನ್ನ ತಾಯಿ, ನನ್ನ ಗಂಡ ಹಾಗೂ ಇತರರು ನಾಡನಹಳ್ಳಿಯ ಅರೋಪಿಯ ಮನೆಗೆ

ಹೋದರು. ನನ್ನ ಅಕ್ಕ ಗರ್ಭಿಣಿಯಾಗಿದ್ದರಿಂದ ನಾನು ಅವಳ ಜೊತೆ ವರುಣದಲ್ಲಿ ಉಳಿದುಕೊಂಡಿದ್ದೆ. ನಂತರ ಪಲ್ಲವಿ ಮರಣ ಹೊಂದಿರುತ್ತಾಳೆ ಎಂದು ತಿಳಿಯಿತು. ಆರೋಪಿಯೇ ಪಲ್ಲವಿಯನ್ನು ಕೊಲೆ ಮಾಡಿದ್ದಾನೆ ಎಂದು ತಿಳಿಯಿತು. ಈ ಎಲ್ಲ ವಿಷಯದ ಬಗ್ಗೆ ನಾನು ಪೋಲಿಸರಿಗೆ 14.6.2023 ರಂದು ಹೇಳಿಕೆ ನೀಡಿರುತ್ತೇನೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಚಾಸ 1, 7, 12 ರಿಂದ 15 ನ್ನು ಒಂದೇ ಬಾರಿಗೆ ಪಾಟೀ ಸವಾಲು ಮಾಡುವುದಾಗಿ ಅರ್ಜಿ ಸಲ್ಲಿಸಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ತ ನ್ಯಾಯಾಧೀಶರು
ಮೈಸೂರು